ವರ್ತಿಸಿದ್ದರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದಲೇ ಅಧಿಕಾರಿಗಳ ವಿರುದ್ಧ ಮುಂದಿನ ಕ್ರಮ ಕೈಬಿಡಲು ಎನ್.ಜಿ.ಇ.ಎಫ್ ನ ನಿರ್ದೇಶಕರ ಮಂಡಳಿಯು ನಿರ್ಧರಿಸಿದೆ.

ಉ) ಈ ಅಭ್ಯಾಸವು ಅನೇಕ ವರ್ಷಗಳಿಂದ ರೂಢಿಯಲ್ಲಿದೆ, ಆದರೆ, ಈ ಅಭ್ಯಾಸವು ಆರಂಭವಾದ ವರ್ಷವನ್ನು ಕರಾರುವಕ್ಕಾಗಿ ಸೂಚಿಸಲು ಸಾಧ್ಯವಿಲ್ಲ.

ಮೈಸೂರು ಕಾಗದದ ಕಾರ್ಖಾನೆಯು ಕಾಸ್ಟಿಕ್ ಸೋಡಾವನ್ನು ಕೊಳ್ಳುತ್ತಿರುವುದರ ಬಗ್ಗೆ

456 - ಶ್ರೀ ಸಿ. ಭೈರೇಗೌಡ (ವೇಮಗಲ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಮೈಸೂರು ಕಾಗದದ ಕಾರ್ಖಾನೆಯು ಕಾಸ್ಟಿಕ್ ಸೋಡಾವನ್ನು ಈಗ ಕೊಳ್ಳುತ್ತಿರುವ ದರವೆಷ್ಟು?

ಆ) ಕಾಸ್ಟಿಕ್ ಸೋಡಾ ಸರಬರಾಜಿನಲ್ಲಿ ವಿಳಂಬ ಉಂಟಾಗಿರುವುದರಿಂದ ಮೈಸೂರು ಕಾಗದದ ಕಾರ್ಖಾನೆಯು ನಷ್ಟ ಅನುಭವಿಸುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಒಂದು ಟನ್ ಕಾಸ್ಟಿಕ್ಕೋಡಾದಿಂದ ಮೈಸೂರು ಕಾಗದ ಕಾರ್ಖಾನೆಗೆ ಅನುಭವಿಸಿದ ನಷ್ಟ ಎಷ್ಟೆಂದು ಅಂದಾಜು ಮಾಡಲಾಗಿದೆ?

ಈ) ಮೇಲ್ಕಂಡ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಎಂ.ಪಿ.ಎಂ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಾಸ್ಟಿಕ್ ಸೋಡಾ ಕೊಳ್ಳಲು ಟನ್ ಒಂದಕ್ಕೆ ರೂ.9,900-00ನಿಂದ 10,000ದವರೆಗೆ ಇವೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ಮಿನರಲ್ಸ್ ಸಂಸ್ಥೆಯ ಬಗ್ಗೆ

592 - ಶ್ರೀ ಎಂ. ರಾಮಪ್ಪ ಬಳ್ಳಾರಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಮೈಸೂರು ಮಿನರಲ್ಸ್ ಸಂಸ್ಥೆಯು ತನ್ನ ಸಂಡೂರು ವಿಭಾಗದಿಂದ ಅದಿರನ್ನು ಲೋಹ ವ್ಯಾಪಾರಿ ಸಂಸ್ಥೆ (ಎಂ. ಎಂ. ಟಿ. ಸಿ)ಗೆ ಗುತ್ತಿಗೆದಾರರ ಮೂಲಕ ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಮೈಸೂರು ಮಿನರಲ್ಸ್ ಸಂಸ್ಥೆಯು ತನಗೆ ದೊರೆಯುವ ಲೇಕಡವಾರು ಹೆಚ್ಚುವರಿ ಬೆಲೆಯನ್ನು ಗುತ್ತಿಗೆದಾರರಿಗೆ ಸಮನಾಗಿ ಹಂಚುತ್ತಿದೆಯೇ?

ಇ) ಸಮನಾಗಿ ಹಂಚಿದಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣಗಳೇನು?

ಶ್ರೀ ಎಂ.ಎಲ್. ಉಸ್ತಾದ್ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ಮೈಸೂರು ಮಿನರಲ್ಸ್ ಸಂಸ್ಥೆಯು ತನ್ನ ಕಬ್ಬಿಣ ಅದಿರು ಗಣಿಗಳಿಂದ ತಾನು ಅಭಿವೃದ್ಧಿಪಡಿಸಿ, ಉತ್ಪಾದಿಸಿದ ಕಬ್ಬಿಣದ ಅದಿರನ್ನು ಅಳತೆಗನುಸಾರವಾಗಿ ಒದೆದು ಉತ್ತಮ ಅದಿರನ್ನು ಒಟ್ಟಿಗೆ ಇದ್ದ ಕೆಳದರ್ಜೆ ಮತ್ತು ಇತರೆ ಕಲ್ಲುಗಳನ್ನು ಬೇರ್ಪಡಿಸಿ ಲೋಹ ವ್ಯಾಪಾರಿ ಸಂಸ್ಥೆಯಿಂದ ಅಂಗೀಕೃತವಾಗುವಂತೆ ಕಬ್ಬಿಣ ಅದಿರನ್ನು ಸ್ವಚ್ಛಗೊಳಿಸಿ, ಅದಿರನ್ನು ತೋರಣಗಲ್ಲು ಅಥವಾ ಮೊಸ ಪೇಟೆಯಲ್ಲಿನ ಲೋಹ